ದಿನಾಂಕ 14-02-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಅಜ್ಜನ ಹೆಸರು ಮರಿಯಪ್ಪ ಭರಮಪ್ಪ. ಸದರಿಯವರಿಗೆ 1 ನೇ ಪ್ರತಿವಾದಿ ಸಂಬಂದಪಡುವುದಿಲ್ಲ. 1 ನೇ ಪ್ರತಿವಾದಿ ಸದರಿಯವರಿಗೆ ಮೊಮ್ಮಗಳು ಆಗಬೇಕು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಮರಿಯಪ್ಪನ ಮಗ ನೀಲಪ್ಪ ಅವರ ಮಗಳು ಎಂದೆರೆ ಸರಿಯಲ್ಲ. ನನ್ನ ಅಜ್ಜ ಮೆಣಸಿನಹಾಳ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ.ಚಪ್ಪರದ ಹಳ್ಳಿ ಗ್ರಾಮ ನನ್ನ ಅಜ್ಜನ ಪತ್ನಿಯ ತವರು ಮನೆ. ಹೊನ್ನಮ್ಮ ಅವರು ದುರುಗಪ್ಪ ಅವರು ಸಣ್ಣ ವಯಸ್ಸಿನಲ್ಲಿ ಇದ್ದಾಗ ಮೆಣಸಿನಹಾಳ ಬಿಟ್ಟು ಚಪ್ಪರದ ಹಳ್ಳಿಗೆ ಬಂದು ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಹೆಂಡತಿ ಚಪ್ಪರದ ಹಳ್ಳಿಗೆ ಹೋದ ಕಾರಣ ಮೆಣಸಿನಹಾಳ ಗ್ರಾಮದಲ್ಲಿ 1 ನೇ ಪ್ರತಿವಾದಿ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ ಮರಣ ಹೊಂದುವರೆಗೂ 1 ನೇ ಪ್ರತಿವಾದಿ ಅವರ ಯೋಗ ಕ್ಷೇಮಾವನ್ನು ನೋಡಿಕೊಂಡಿರುತಾರೆ ಎಂದರೆ ಸರಿಯಲ್ಲ.

2. ಬೈಲು ಜಾಗವನ್ನು ಮರಿಯಪ್ಪ ಅವರು ಹನುಮಂತಪ್ಪ ಅವರಿಗೆ ಮಾರಾಟ ಮಾಡಿರುವ ಬಗ್ಗೆ ನನಗೆ ತಿಳಿದಿರುತ್ತದೆ. ಸದರಿ ಜಾಗವನ್ನು ಯಾವಾಗ ಎಷ್ಟು ಬೆಲೆಗೆ ಮಾರಾಟ ಮಾಡಿದರು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ಕೆಲವೇ ದಿನಗಳಲ್ಲಿ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಯಲ್ಲಿ ಖಾತೆ ಬದಲಾವಣೆ ಮಾಡುವಾಗ ಠರಾವು ಪಾಸ್ ಮಾಡುತ್ತಾರೆ ಎಂದರೆ ಸರಿ. ಅದರಂತೆ ಮರಿಯಪ್ಪ 1 ನೇ ಪ್ರತಿವಾದಿಗೆ ಹಕ್ಕು ಬಿಟ್ಟು ಕೊಟ್ಟ ಪ್ರಕಾರ ದಾವಾ ಆಸ್ತಿಯನ್ನು ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಂತರದ ದಿನಗಳಲ್ಲಿ ಹಣದ ಅಡಚಣೆಗಾಗಿ 2 ನೇ ಪ್ರತಿವಾದಿಗೆ ದಾವಾ ಅಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ನನ್ನ ತಂದೆಗೆ ತಿಳಿದಿತ್ತು ಎಂದರೆ ಸರಿಯಲ್ಲ. ನನ್ನ ಅಜ್ಜ ಚಪ್ಪರದ ಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುವುದಿಲ್ಲ 1 ನೇ ಪ್ರತಿವಾದಿಯ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ದಿನಾಂಕ 22-09-2000 ನೇ ಇಸವಿಯಲ್ಲಿ ನನ್ನ ಅಜ್ಜ ಮೆಣಸಿನಹಾಳ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ ಎಂದು ಮರಣ ಪ್ರಮಾಣ ಪತ್ರ ನೀಡಲಾಗಿದೆ ಸದರಿ ಮರಣ ಪ್ರಮಾಣ

ಪತ್ರವನ್ನು ಮುಖಬೆಲೆ ಮಾಡಲಾಗಿ ನೋಡಿ ಗುರುತಿಸಿದ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. ನನ್ನ ತಂದೆಗೆ ನನ್ನ ಅಜ್ಜ ಚಪ್ಪರದ ಹಳ್ಳಿ ಗ್ರಾಮದಲ್ಲಿ ವಾಸವಾಗಿರದಿದ್ದರೂ ಅಲ್ಲಿ ವಾಸವಾಗಿದ್ದಾರೆ ಎಂದು ಹೇಳಿ ಸುಳ್ಳು ಮಾಹಿತಿಯನ್ನು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮೋಸದಿಂದ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಮಾಹಿತಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಖಾತೆ ಬದಲಾವಣೆ ಬಗ್ಗೆ ಸುಮಾರು 7-8 ವರ್ಷಗಳ ಹಿಂದೆ ತಿಳಿದಿರುತ್ತದೆ. ಸದರಿ ಮೋಸದ ಖಾತೆ ಬದಲಾವಣೆ ಆಗಿದೆ ಎಂದು ದೂರನ್ನು ನೀಡಿರುವುದಿಲ್ಲ. 1 ನೇ ಪ್ರತಿವಾದಿಯು ಯಾವುದೇ ಮೋಸ ಮಾಡಿರದ ಕಾರಣ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಂದಾಜು ಮೌಲ್ಯ ಎಷ್ಟು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಇವತ್ತಿನ ಮೌಲ್ಯ 20 ರಿಂದ 25 ಲಕ್ಷ ಇರುತ್ತದೆ ಎಂದರೆ ಸರಿಯಲ್ಲ. ದಾವೆ ಹೂಡುವ ಕಾರಣಕ್ಕಾಗಿ 50,000/- ರೂ ಮೌಲ್ಯವನ್ನು ನಮೂದಿಸಿರುತ್ತೀರಾ ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಬಗ್ಗೆ 7-8 ವರ್ಷಗಳ ಹಿಂದೆ ತಿಳಿದಿದ್ದು ಈಗ ದಾವೆ ಹೂಡಿರುವ ಕಾರಣ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆಯನು ಹೂಡಿರುತ್ತೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆ.ನ್ಯಾ.ದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ. C/c. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.